**ಓ.ಎಸ್. ನಂಃ 560/2022**

**ಪಿ.ಡಬ್ಲ್ಯೂಃ 1**

**ದಿನಾಂಕ 19.07.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಕೆ.ಆರ್.ಎಸ್.ವಕೀಲರಿಂದಃ</u>**

1. ನಾನು 9 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ವಾದ ಪತ್ರದಲ್ಲಿ ಬರೆಸಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದೆ. 1 ನೇ ಪ್ರತಿವಾದಿಯ ಗಂಡನಾದ ಅಪ್ಪಾಜಿಗೌಡರಿಗೆ 2022 ನೇ ಸಾಲಿನಲ್ಲಿ 60 ರಿಂದ 65 ವರ್ಷ ವಯಸ್ಸಾಗಿತ್ತು. ಸದರಿ ಅಪ್ಪಾಜಿಗೌಡರಿಗೆ ಒಟ್ಟು 2 ಜನ ಮಕ್ಕಳು. ಅಪ್ಪಾಜಿಗೌಡರ ಮಗಳಾದ 3 ನೇ ಪ್ರತಿವಾದಿಯನ್ನು ವಿವಾಹ ಮಾಡಿ ಕೊಟ್ಟಿದ್ದು, 2 ನೇ ಪ್ರತಿವಾದಿಯು ಈಗ 2-3 ತಿಂಗಳುಗಳ ಹಿಂದೆ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. 2 ನೇ ಪ್ರತಿವಾದಿ ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟ ಬಗ್ಗೆ ನಾನು ನ್ಯಾಯಾಲಯದ ಗಮನಕ್ಕೆ ತಂದಿರುವುದಿಲ್ಲ.

2. 1 ನೇ ಪ್ರತಿವಾದಿಯ ಗಂಡನಾದ ಅಪ್ಪಾಜಿಗೌಡರು ನನ್ನ ಅಜ್ಜಿಯಾದ ನಿಂಗಮ್ಮ ಕೋಂ.ಹನುಮೇಗೌಡರವರ ಕಡೆಯಿಂದ ನಮ್ಮ ಸಂಬಂಧಿಕರು. ಸದರಿ ಅಪ್ಪಾಜೀಗೌಡರಿಗೆ ಒಟ್ಟು 2 ಮನೆಗಳಿದ್ದು, ಅಪ್ಪಾಜಿಗೌಡರ ಹಳೆಯ ಮನೆಯು ಸಾಲಿಗ್ರಾಮದ ಪಟೇಲ್ ರಾಜನ ಬೀದಿಯಲ್ಲಿಯಲ್ಲಿರುವ ಮಂಚಮ್ಮ ದೇವಸ್ಥಾನದ ಪಕ್ಕದಲ್ಲಿದ್ದು, ಅಪ್ಪಾಜಿಗೌಡರ ಹೊಸ ಮನೆಯು ಸಾಲಿಗ್ರಾಮದ ನರಸಿಂಹಸ್ವಾಮಿ ದೇವಸ್ಥಾನದ ಹಿಂಭಾಗದಲ್ಲಿದೆ.

3. ನಾನು ಈ ಹಿಂದೆ ಸಲ್ಲಿಸಿದ್ದ ಸಿ.ಸಿ 2183/2022 ರ ಪ್ರಕರಣದಲ್ಲಿ ಅಪ್ಪಾಜಿಗೌಡರ ಹೊಸ ಮನೆಯ ವಿಳಾಸವನ್ನು ನೀಡಿರುತ್ತೇನೆ. 3 ನೇ ಪ್ರತಿವಾದಿಯು ತನ್ನ ಗಂಡನ ಮನೆಯಾದ ಸಾಲಿಗ್ರಾಮದ ಗಣಪತಿ ದೇವಸ್ಥಾನದ ಪಕ್ಕದಲ್ಲಿ ಇರುವ ಮನೆಯಲ್ಲಿ ವಾಸವಿದ್ದಾರೆ. 1 ನೇ ಪ್ರತಿವಾದಿಯು ಅಪ್ಪಾಜಿಗೌಡರ ಹೊಸ ಮನೆಯಲ್ಲಿ ವಾಸವಿದ್ದಾರೆ.

4. 1 ನೇ ಪ್ರತಿವಾದಿಯ ಗಂಡನಾದ ಅಪ್ಪಾಜಿಗೌಡರು ನನ್ನ ತಂದೆಯ ಸ್ನೇಹಿತರಾಗಿದ್ದು, ನನಗೂ ಸಹ ಬಾಲ್ಯದಿಂದ ಸದರಿ ಅಪ್ಪಾಜಿಗೌಡರ ಪರಿಚಯ ಇದೆ. ನನ್ನ ಗಂಡನಿಗೂ

ಸಹ ಅಪ್ಪಾಜಿಗೌಡರ ಪರಿಚಯ ಇದೆ. ಅಪ್ಪಾಜಿಗೌಡರು ನನ್ನ ಅಜ್ಜಿಯಾದ ನಿಂಗಮ್ಮ ಕೋಂ.ಹನುಮೇಗೌಡರವರ ಕಡೆಯಿಂದ ನಮ್ಮ ಸಂಬಂಧಿಕರು ಹಾಗೂ ಅವರು ನನ್ನ ತಂದೆಯ ಸ್ನೇಹಿತರು ಎಂದು ನಾನು ಸಿ.ಸಿ 2183/2022 ರ ಪ್ರಕರಣದಲ್ಲಿ ಹೇಳಿರುತ್ತೇನೆ.

5. 2022 ರ ಅಗಸ್ಟ್ ತಿಂಗಳಿನ ದಿನಾಂಕ 15 ಅಥವಾ 20 ನೇ ತಾರಿಕನಂದು 1 ನೇ ಪ್ರತಿವಾದಿಯ ಗಂಡನಾದ ಅಪ್ಪಾಜಿಗೌಡರು ನನ್ನ ಬಳಿ ಸಾಲವನ್ನು ಕೇಳಿದ್ದರು. ಸದರಿ ವಿಷಯವನ್ನು ನಾನು ಸಿ.ಸಿ 2183/2022 ರ ಪ್ರಕರಣದಲ್ಲಿ ಹೇಳಿರುತ್ತೇನೆ. ದಿನಾಂಕ 05.09.2022 ರಂದು ನಾನು 1 ನೇ ಪ್ರತಿವಾದಿಯ ಗಂಡನಾದ ಅಪ್ಪಾಜಿಗೌಡರಿಗೆ ನಾಲ್ಕು ಲಕ್ಷ ರೂಪಾಯಿ ಸಾಲವನ್ನು ನೀಡಿರುತ್ತೇನೆ. ದಿನಾಂಕ 05.09.2022 ರಂದು ನನ್ನ ಬಳಿ ನಾಲ್ಕು ಲಕ್ಷ ರೂಪಾಯಿ ಹಣ ಇತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಅಪ್ಪಾಜಿಗೌಡರಿಗೆ ಸಾಲವಾಗಿ ಕೊಟ್ಟಿದ್ದ ನಾಲ್ಕು ಲಕ್ಷ ರೂಪಾಯಿ ಹಣವನ್ನು ಬ್ಯಾಂಕಿನಲ್ಲಿಟ್ಟಿರಲಿಲ್ಲ ಬದಲಾಗಿ ನನ್ನ ಮನೆಯಲ್ಲಿಯೇ ಇಟ್ಟಿದ್ದೆ.

6. ನಿಪಿ.11 ರ ಪ್ರಕಾರ ದಿನಾಂಕ 06.09.2022 ರಂದು ನನ್ನ ಬ್ಯಾಂಕ್ ಖಾತೆಯಲ್ಲಿ ಕೇವಲ 638/- ರೂಪಾಯಿ ಮಾತ್ರ ಹಣ ಇತ್ತು ಎಂದರೆ ಸರಿ. ನಿಪಿ.11 ರ ಪ್ರಕಾರ ನನ್ನ ಬ್ಯಾಂಕ್ ವ್ಯವಹಾರವು 30,000/- ರೂಪಾಯಿ ಒಳಗೆ ಇರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ 3 ½ ಎಕರೆ ಜಮೀನು ಇದ್ದು, ಅದರಲ್ಲಿ 1 ವರ್ಷಕ್ಕೆ 2 ಸಲ ಭತ್ತವನ್ನು ಬೆಳೆಯನ್ನು ಬೆಳೆಯುತ್ತೇನೆ ಹಾಗೂ ಅದರಿಂದ ನನಗೆ 1 ವರ್ಷಕ್ಕೆ ಐದು ಲಕ್ಷ ರೂಪಾಯಿ ಆದಾಯವಿರುತ್ತದೆ, ಅದಲ್ಲದೆ ನನಗೆ 1 ½ ಎಕರೆ ತೆಂಗಿನ ತೋಟ ಇದ್ದು ಸದರಿ ತೆಂಗಿನ ತೋಟದಲ್ಲಿ ಬೆಳೆದ ತೆಂಗಿನ ಕಾಯಿಯಿಂದ ಹಾಗೂ ನನ್ನ ಸದರಿ ತೋಟದಲ್ಲಿ ನಾನು ತರಕಾರಿ ಮತ್ತು ಶುಂಠಿ ಬೆಳೆಗಳನ್ನು ಬೆಳೆದು 1 ವರ್ಷಕ್ಕೆ ಅದರಿಂದಲೂ ಸಹ ನನಗೆ ಐದು ಲಕ್ಷ ರೂಪಾಯಿಯಷ್ಟು ವಾರ್ಷಿಕ ಆದಾಯ ಬರುತ್ತಿದ್ದು, ನನ್ನ ಮೇಲೆ ಹೇಳಿದ ಮೂಲಗಳಿಂದ ನನಗೆ 1 ವರ್ಷಕ್ಕೆ ಹತ್ತು ಲಕ್ಷ ರೂಪಾಯಿ ಆದಾಯ ಬರುತ್ತದೆ. ಅದಲ್ಲದೇ ನನ್ನ ಬಳಿ 5 ಹಸುಗಳಿದ್ದು, ಅವುಗಳಿಂದ ಬಂದ ಹಾಲನ್ನು ನಾನು ಡೈರಿಗೆ ಕೊಟ್ಟು ಅದರಿಂದ ನನಗೆ ಒಂದು ತಿಂಗಳಿಗೆ 5 ರಿಂದ 10 ಸಾವಿರ ರೂಪಾಯಿ ಆದಾಯ ಬರುತ್ತದೆ. ಅದಲ್ಲದೇ ನನ್ನ ಮಾವನಾದ ನಾಗರಾಜುರವರು ಜೇನು ನೋಣ ಕಡಿದು ಮೃತಪಟ್ಟ ಕಾರಣ, ಸರ್ಕಾರದಿಂದ ನಮಗೆ

ಎರಡು ಲಕ್ಷ ರೂಪಾಯಿ ಪರಿಹಾರ ಹಣವು ಸಿಕ್ಕಿರುತ್ತದೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

7. ನಿಮ್ಮ ಹೆಸರಿನಲ್ಲಿ ಜಮೀನು ಇದ್ದ ಬಗ್ಗೆ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನ್ನ ಅತ್ತೆಯಾದ ರಾಜಮ್ಮರವರ ಹೆಸರಿನಲ್ಲಿ 2 ಎಕರೆ 15 ಗುಂಟೆ ಜಮೀನು, ನನ್ನ ಮಾವನಾದ ನಾಗರಾಜುರವರು ಹೆಸರಿನಲ್ಲಿ ಒಂದುವರೆ ಎಕರೆ ಜಮೀನು ಮತ್ತು ನನ್ನ ಗಂಡನಾದ ಮಂಜುನಾಥ ರವರ ಹೆಸರಿನಲ್ಲಿ 35 ಗುಂಟೆ ಜಮೀನು ಇದ್ದು, ನಾನು ಒಬ್ಬಳೇ ಮನೆಯ ಸೊಸೆಯಾಗಿದ್ದು, ನನ್ನ ಗಂಡನಿಗೆ ಅಷ್ಟೊಂದು ವ್ಯವಹಾರಿಕ ಜ್ಞಾನ ಇಲ್ಲದಿರುವ ಕಾರಣ ನಾನೇ ನಮ್ಮ ಮನೆಯ ಹಣಕಾಸಿನ ವ್ಯವಹಾಗಳನ್ನೆಲ್ಲಾ ನೋಡಿಕೊಳ್ಳುತ್ತಿದ್ದು ನಮ್ಮ ಮನೆಯಲ್ಲಿ ನಾನು, ನನ್ನ ಅತ್ತೆ ಮತ್ತು ನನ್ನ ಗಂಡ ನಾವೆಲ್ಲಾರೂ ಒಟ್ಟಾಗಿ ದುಡಿದು ಬಂದ ಆದಾಯವನ್ನು ನಾನೇ ನಿರ್ವಹಿಸುತ್ತಿದ್ದೇನೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

8. ನನ್ನ ಗಂಡನ ಹೆಸರಿನಲ್ಲಿರುವ ಜಮೀನಿನ ಮೇಲೆ ನಾವು ಸಹಕಾರ ಬ್ಯಾಂಕಿನಿಂದ 60,000/- ರೂಪಾಯಿ ಸಾಲವನ್ನು ಪಡೆದುಕೊಂಡಿರುತ್ತೇವೆ. ನಾನು ಪ್ರತಿವಾರ ಡೈರಿಗೆ ಹಾಲನ್ನು ಹಾಕುವುದಿಲ್ಲ. ನಿಪಿ.11 ರ ಬ್ಯಾಂಕ್ ಖಾತೆಯನ್ನು ಹೊರತುಪಡಿಸಿ ಸಾಲಿಗ್ರಾಮದ ಕರ್ನಾಟಕ ಬ್ಯಾಂಕಿನಲ್ಲಿ ನನಗೆ ಸೇರಿದ ಇನ್ನೊಂದು ಬ್ಯಾಂಕ್ ಖಾತೆ ಇದೆ. ನಾನು ಡೈರಿಗೆ ಹಾಲನ್ನು ಹಾಕಿದರ ಸಂಬಂಧ ಅದರ ಹಣವು ನನ್ನ ನಿಪಿ.11 ರ ಬ್ಯಾಂಕ್ ಖಾತೆಗೆ ಬರುತ್ತದೆ.

9. ನಮ್ಮ ಜಮೀನಿನಲ್ಲಿ ಯಾವ ಬೆಳೆಯನ್ನು ಎಷ್ಟು ಸಾರಿ ಬೆಳೆಯುತ್ತೇವೆ ಹಾಗೂ ನಮ್ಮ ಜಮೀನಿನಲ್ಲಿ ಎಷ್ಟು ತೆಂಗಿನ ಮರಗಳು ಇವೆ ಹಾಗೂ ನಮ್ಮ ಜಮೀನಿಂದ ಎಷ್ಟು ಉತ್ಪತ್ತಿ ಇದೆ ಎಂದು ತೋರಿಸಲು ನಾನು ನಮ್ಮ ಜಮೀನಿನ ಬೆಳೆ ದೃಡೀಕರಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

10. ನಾವು ಮೂರುವರೆ ಎಕರೆ ಜಮೀನಿನಲ್ಲಿ ಭತ್ತವನ್ನು ಬೆಳೆಯುತ್ತೇವೆ. ಒಂದುವರೆ ಎಕರೆ ಜಮೀನಿನಲ್ಲಿ ತೆಂಗಿನ ಮರಗಳನ್ನು ಬೆಳೆದಿರುತ್ತೇವೆ. ನಮ್ಮ ಒಂದುವರೆ ಎಕರೆ ತೆಂಗಿನ ತೋಟದಲ್ಲಿ ನಾನು ತರಕಾರಿಯನ್ನು ಸಹ ಬೆಳೆಯುತ್ತೇನೆ. ನಿಪಿ.6, 7 ರ ಮತ್ತು ನಿಪಿ.10 ರ ದಾಖಲೆಗಳಲ್ಲಿ ನಿಮ್ಮ ಗಂಡನ ಹೆಸರಿನಲ್ಲಿ 2 ಬ್ಯಾಂಕುಗಳಿಂದ ಸಾಲ

ಪಡೆದ ಬಗ್ಗೆ ನಮೂದು ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅದು ಕೃಷಿಸಾಲವಾಗಿದ್ದು, ಅದರ ಮೇಲೆ ಯಾವುದೇ ಬಡ್ಡಿ ಇರುವುದಿಲ್ಲ ಮತ್ತು ಆ ಸಾಲವನ್ನು ನಾವು ಈಗಾಗಲೇ ತೀರಿಸಿದ್ದು, ಸಾಲ ತೀರಿಸಿದರ ಸಂಬಂಧ ನಾನು ತಿರುವಳಿ ದೃಡೀಕರಣ (Clearance certificate) ನ್ನು ಬ್ಯಾಂಕಿನಿಂದ ತಂದು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

11. ನಾನು ಮತ್ತು ನನ್ನ ಕುಟುಂಬಸ್ಥರು ಬೇರೆ ಜನರಿಂದಲೂ ಸಹ ಸಾಲವನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮಾವನಾದ ನಾಗರಾಜುರವರು 2020 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ಮಾವನವರ ಮರಣದ ಪರಿಹಾರ ಧನ ನನ್ನ ಬ್ಯಾಂಕ್ ಖಾತೆಗೆ ಬಂದಿರುವುದಿಲ್ಲ ಬದಲಾಗಿ ನನ್ನ ಅತ್ತೆಯಾದ ರಾಜಮ್ಮರವರು ಬ್ಯಾಂಕ್ ಖಾತೆಗೆ ಬಂದಿರುತ್ತದೆ. ನನ್ನ ಅತ್ತೆ ಮತ್ತು ಮಾವನಿಗೆ ರಾಣಿ ಮತ್ತು ಶೋಭಾ ಎನ್ನುವ ಎರಡು ಜನ ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ. ನನ್ನ ನಾದಿನಿಯಾದ ರಾಣಿ ಎನ್ನುವವರನ್ನು ನಮ್ಮದೇ ಊರಾದ ಅಂಕನಹಳ್ಳಿ ಗ್ರಾಮಕ್ಕೆ ವಿವಾಹ ಮಾಡಿ ಕೊಟ್ಟಿರುತ್ತಾರೆ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**